# ಟಿ.ಇ.ಟಿ. ಪ್ರಾಥಮಿಕ ಶಾಲಾ ವಿಜ್ಞಾನ ಶಿಕ್ಷಕ – 2014

# ಪ್ರಥಮ ಭಾಷೆ - ಕನ್ನಡ

ನೀವು ಜನಪ್ರಿಯರಾಗಬೇಕೆಂದಿರುವಿರಾ? ದಾರಿ ಕಾಣದಾಗಿದೆ? ಉಪಾಯ ಇಲ್ಲಿದೆ: ಜನರ ವೈಶಿಷ್ಯ ಸಾಮರ್ಥ್ಯ ದಕ್ಷತೆಗಳನ್ನು ಗಮನಿಸಿ, ಗುರುತಿಸಿ, ಹೃತ್ಪೂರ್ವಕವಾಗಿ ಆನಂದಿಸಬಲ್ಲಿರಾ? ಅವರನ್ನು ಪ್ರೊತ್ಸಾಹಿಸಬಲ್ಲಿರಾ? ತಾಳ್ಮೆಯಿಂದ ಅವರ ಹಿತಚಿಂತನೆ ಮಾಡಬಲ್ಲಿರಾ? ಅವರಿಗಾಗಿ ದೇವರಲ್ಲಿ ಪ್ರಾರ್ಥಿಸಬಲ್ಲಿರಾ? ಎಂದರೆ ನಿಃಸ್ವಾರ್ಥ ಪ್ರೀತಿಯ್ನನು ನೀಡಬಲ್ಲಿರಾ? ಹೌದು ಎಂದಾದಲ್ಲಿ ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ.

ನೀವು ಸುಲಭವಾಗಿ ಒಳ್ಳೆಯ ಚಿಂತನಶೀಲ ವ್ಯಕ್ತಿಗಳೂ, ಸಂಶೋಧಕರೂ ಆಗಬೇಕೆಂದಿರುವಿರಾ? ನೀವು ಆರಿಸಿಕೊಂಡ ಅಧ್ಯಯನದ ವಿಷಯವನ್ನು ಮನಸಾರೆ ಪ್ರೀತಿಸಿರಿ. ಆಗ ಎಂಥೆಂಥ ಅದ್ಭುತ ಯೋಚನೆಗಳು ಓಡೋಡಿ ಬರುತ್ತವೆಂದು ನೋಡಿ.

ನೀವು ಆರೋಗ್ಯವಂತರೂ, ಬಲಶಾಲಿಗಳೂ ಆಗಬೇಕೆಂದಿರುವಿರಾ? ಶುಭೇಚ್ಛೆ ಹಾಗೂ ಪ್ರೀತಿಯ ತರಂಗಗಳನ್ನು ನಿಮ್ಮ ಸುತ್ತಮುತ್ತಲಿನ ಜನ ಮಾತ್ರವಲ್ಲ. ಪಶುಪಕ್ಷಿ, ಕ್ರಿಮಿಕೀಟ, ತರುವೃಕ್ಷ, ಫಲ, ಪುಷ್ಪಗಳೆಡೆಗೆ. ಎಂದರೆ ನಿಸರ್ಗದೆಡೆ ಹರಿಸಿ. ಆಗ ಇದರ ಪರಿಣಾಮ ನಿಮ್ಮ ಅಂತರ್ಮನಸ್ಸಿನ ಮೇಲಾಗಿ ರಕ್ತದ ಕಣಗಳ ಮೇಲೂ ಸತ್ಪರಿಣಾಮ ಉಂಟಾಗುವುದು! ದ್ವೇಷವನ್ನು ಬೆಳೆಸಿ, ಬಿತ್ತರಿಸಿದಿರಾದರೆ ಶರೀರ ಹಾಗೂ ಮನಸ್ಸು ವಿಷಯುಕ್ತವಾಗುತ್ತದೆ.

ಹೌದು, ಪ್ರೀತಿ ಮಾತ್ರ ಅತ್ಯಂತ ಹಿತಕರ ಹಾಗೂ ಆರೋಗ್ಯವರ್ಧಕ ರಾಸಾಯನಿಕ ಪರಿಣಾಮಗಳನ್ನು ರಕ್ತದಲ್ಲಿ ಉಂಟು ಮಾಡುತ್ತದೆ. ಅಂದ ಮೇಲೆ ನೀವು ಅನುಸರಿಸಬೇಕಾದ ಆದರ್ಶ ಪಥ ಯಾವುದೆಂದು ಬೇರೆ ಹೇಳಬೇಕೆ?

1. 'ಜನರಿಂದ ಅಪಾರವಾದ ಪ್ರೀತಿಯನ್ನು ಗಳಿಸಿ, ಜನಪ್ರಿಯರಾಗಲು ಮಾಡಬೇಕಾದ ಪ್ರಮುಖ ಕಾರ್ಯ':
   1) ಜನರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು
   2) ಜನರ ಹಿತಚಿಂತನೆಯನ್ನು ಮಾಡುವುದು
   3) ಜನರ ಅಭ್ಯುದಯಕ್ಕಾಗಿ ದೇವರನ್ನು ಪ್ರಾರ್ಥಿಸುವುದು
   4) ಜನರಿಗೆ ನಿಃಸ್ವಾರ್ಥ ಪ್ರೀತಿಯನ್ನು ನೀಡುವುದು
2. ಒಬ್ಬ ಸಂಶೋಧಕನಾಗಬೇಕೆಂಬ ವ್ಯಕ್ತಿಗೆ ಅದ್ಬುತವಾದ ಯೋಚನೆಗಳು ಅವಶ್ಯಕ. ಇಂತಹ ಯೋಚನೆಗಳೊಂದಿಗೆ ಆತನು ಉತ್ತಮ ಸಂಶೋಧಕನಾಗಲು ಮೊದಲು ಹೀಗೆ ಮಾಡಬೇಕು.
   1) ಅಧ್ಯಯನದ ವಿಷಯವನ್ನು ಬಲವಾಗಿ ಇಷ್ಟಪಡಬೇಕು
   2) ಅದ್ಭುತವಾದ ಯೋಚನೆಗಳನ್ನು ಮನಸಾರೆ ಪ್ರೀತಿಸಬೇಕು
   3) ಒಳ್ಳೆಯ ಚಿಂತನಶೀಲ ಸಂಶೋಧನೆಗಳನ್ನು ಮಾಡಬೇಕು
   4) ಸಂಶೋಧಕನಾಗಬೇಕೆಂದು ಸದಾ ಯೋಚನಾ ಮಗ್ನನಾಗಬೇಕು
3. ಜಗತ್ತು ಬಲಶಾಲಿಗಳನ್ನು ಗೌರವಿಸುತ್ತದೆ, ಆರಾಧಿಸುತ್ತದೆ. ಅಂತಹ ಗೌರವಕ್ಕೆ ಪಾತ್ರರಾಗಲು ಮೂಲವಾಗಿ ಮಾಡಬೇಕಾದ ಕಾರ್ಯ:
   1) ಸುತ್ತಮುತ್ತಲಿನ ಜನರಿಗೆ ಶುಭೇಚ್ಛೆ ಹಾಗು ಪ್ರೀತಿಯನ್ನು ಆಶಿಸಬೇಕು
   2) ಪಶುಪಕ್ಷಿ, ಕ್ರಿಮಿಕೀಟಗಳಿಗೆ ದಯೆ ಮತ್ತು ಕರುಣೆಯನ್ನು ತೋರಿಸಬೇಕು
   3) ನಿಸರ್ಗದೆಡೆಗೆ ಒಳ್ಳೆ ಹಂಬಲ ಮತ್ತು ಪ್ರೀತಿಯನ್ನು ಪಸರಿಸಬೇಕು
   4) ತರುವೃಕ್ಷ, ಫಲಪುಷ್ಪಗಳಿಗೆ ಪ್ರೀತಿಯ ತರಂಗಗಳನ್ನು ಮುಟ್ಟಿಸಬೇಕು
4. ಅತ್ಯಂತ ಘೋರ ಪರಿಣಾಮವನ್ನುಂಟು ಮಾಡಬಲ್ಲ ದ್ವೇಷವು ಮನಷ್ಯರಲ್ಲಿ ಬೆಳೆದು ಚಿಗುರಿದಾಗ ಹೀಗಾಗುತ್ತದೆ.
   1) ಶರೀರ ಹಾಗೂ ಮನಸ್ಸು ನಂಬುಗೊಳ್ಳುತ್ತದೆ
   2) ಶರೀರ ಹಾಗೂ ಮನಸ್ಸು ವಿಷಯಾಸಕ್ತವಾಗುತ್ತದೆ
   3) ಶರೀರ ಬೆಳೆದು ಮನಸ್ಸು ವಿಷಯುಕ್ತವಾಗುತ್ತದೆ
   4) ಶರೀರ ಹಾಗೂ ಮನಸ್ಸಿನಲ್ಲಿ ಮರವಾಗುತ್ತದೆ
5. 'ಮಾನವ ಜನ್ಮ ಬಲು ದೊಡ್ಡದು ಎಂಬ ದಾಸರ ವಾಣಿಯಂತೆ ಜೀವನವನ್ನು ಸಾರ್ಥಕಪಡಿಸಿಕೊಳ್ಳು ಅನುಸರಿಸಬೇಕಾದ ಮಾರ್ಗ'
   1) ಆರೋಗ್ಯವಂತ ಮತ್ತು ಬಲಶಾಲಿ ವ್ಯಕ್ತಿಗಳಾಗಬೇಕು

2) ಸರ್ವಹಿತವಾದ ಮತ್ತು ನಿಃಸ್ವಾರ್ಥ ಪ್ರೀತಿಯುಳ್ಳ-ರಾಗಿರಬೇಕು

3) ಚಿಂತನ ಶೀಲರಾಗಿ ಪರಹಿತ ಚಿಂತನೆ ಮಾಡುವ -ವರಾಗಬೇಕು

4) ಶರೀರ ಹಾಗೂ ಮನಸ್ಸನ್ನು ವಿಷಯಯುಕ್ತ -ಗೊಳಿಸಿದವರಾಗಬೇಕು

6. 'ತಾನು ಆದರ್ಶವಾಗಿ ಬಾಳಬೇಕೆಂಬ ಹಂಬಲ ಹೊಂದಿರುವ ಪ್ರತಿಯೊಬ್ಬ ಮನುಷ್ಯನು ಅನುಸರಿಸ-ಬೇಕಾದ ಆದರ್ಶಪಥ'

1) ಜನಪ್ರಿಯ ಪಥ 2) ಆನಂದ ಪಥ

3) ಪ್ರೀತಿಯ ಪಥ 4) ನಿಃಸ್ವಾರ್ಥ ಪಥ

7. ಈ ಕೆಳಗಿನವುಗಳಲ್ಲಿ ದ್ವಿರುಕ್ತಿ , ಜೋಡುನುಡಿ ಮತ್ತು ಕ್ರಿಯಾಪದಗಳು ಅನುಕ್ರಮವಾಗಿರುವುದು:

1) ಕ್ರಿಮಿಕೀಟ, ಎಂಥೆಂಥಗಳಿಸಬಲ್ಲಿರಿ

2) ಎಂಥೆಂಥ, ಪಶುಪಕ್ಷಿ, ಸತ್ಪರಿಣಾಮ

3) ತರುವೃಕ್ಷ, ಓಡೋಡಿ, ಉಂಟಾಗುವುದು

4) ಓಡೋಡಿ, ಫಲಪುಷ್ಪ , ಮಾಡಬಲ್ಲಿರಿ

8. ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ' ಈ ಹೇಳಿಕೆಯಲ್ಲಿರುವ ಕ್ರಿಯಾಪದವು ಈ ರೂಪದಲ್ಲಿದೆ

1) ನಿಷೇಧಾರ್ಥಕ ರೂಪ

2) ವಿಧ್ಯರ್ಥಕ ರೂಪ

3) ನಿರ್ದೇಶನಾತ್ಮಕ ರೂಪ

4) ಸಂಭವನಾರ್ಥಕ ರೂಪ

ಕಿನ್ನರ ಕಿಂಪುರುಷರ ನೌಕೆಗಳಂತೆ
ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ,
ನೂರೊಂದು ಕಡೆಗೆ ತೇಲುತಿಹುದು ನೋಡಾ!
ಬೆಣ್ಣೆ ಕಡೆದ ಮಜ್ಜಿಗೆಯಂತೆ
ಹುಟ್ಟು ಕಡೆದು ನೀರು ಅಟ್ಟಿಸುತಿಹುದು ನೋಡಾ!
ತಪತಪನೆ ಕಾಯ್ದು ಕೋಟಿ ಸೂರ್ಯನಂತೆ
ಕಣ್ಣು ಕುಕ್ಕಿಸುವುದು ನೋಡಾ ಸಾಗರವು!
ಹೆಡೆಯಲ್ಲಿ ಪುಷ್ಪರಾಗವಿಹ ಕಾಳಸರ್ಪಗಳಂತೆ
ಸಾಗಿಹುದು ನೋಡಾ ಸಾವಿರ ತೆರೆಗಳ ವೈಭವವು!
ಹಚ್ಚ ಹಸಿರಿತ್ತು ಹಿಂದೂ ಮಹಾಸಾಗರದ ಬಣ್ಣ
ಕಪ್ಪು ಹಸಿರಿತ್ತು ಮತ್ತೆ !
ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು
ಮುಂದೆ ಬಂದಿಹುದು ಸಮುದ್ರರಾಜ?
ಸರ್ವವರ್ಣದ ಇಂದ್ರಧನುಸ್ಸನ್ನು ಹಿಡಿದು
ಆಕಾಶರಾಜನ ಸರಿಗಟ್ಟಿದೆ ನೀನು,
ಚಣಕೊಮ್ಮೆ ಬಣ್ಣವ ಬದಲಿಸಿ ಚೆಲುವಿಕೆಯನಾಂತು
ಭೂದೇವಿಯನು ಪಾತಾಳಕೆ ಮೆಟ್ಟಿದೆ ನೀನು!
ಮುಗಿಲಿಗಿಂತ ಮಿಗಿಲು ಸಾಗರದ ನೀಲಿ!
ಸಾಗರದ ತುದಿ ತಟ್ಟಿ ಮುಗಿಲೆಲ್ಲ ನೀಲಿಯಾಗಿಹುದು
ಮುಗಿಲನಂತತೆಯೆಲ್ಲ ಮುನ್ನೀರ ಗರ್ಭಪಿಂಡ!
ಮೋಡಗಳೆಂಬ ಓಡುಗಳು ಬಾಂದಳದಿ ತೇಲುವಲ್ಲಿ
ಹಕ್ಕಿಯೆಂಬ ಚಿಕ್ಕ ಮಿನುಗಿದವು ಕಡಲಿನೊಡಲ ಮೇಲ್ಗಡೆಗೆ!
ಗಾಳಿಯಲಿ ರೆಕ್ಕೆ ಬೀಸುತ್ತಿದೆ ಪಕ್ಷಿ ಗಣವು
ಈಸುತಿದೆ ಗಾಳಿಮ ನೀರಿನಲಿ ರೆಕ್ಕೆ ಬಡಿದು!
ನೆಲೆ, ಗಾಳಿ, ಉರಿ, ಮುಗಿಲು
ಪೆಡಂಭೂತಗಳಿವು ನಾಲ್ಕು
ಈ ಮಹಾಭೂತಗಳ ನುಂಗಿ ನೀರ್ಕುಡಿಯುತ್ತ
ಮತ್ತಮದಗಜದಂತೆ ಕ್ರೀಡಿಸುತ ನಿಂತ ಪಂಚಾನನ!
ನಿನ್ನೆದುರು ನರನೆಂಬ ಪಿಳ್ಳಿ ಬರಿ ನೀರ್ಗುಳ್ಳಿ
ಕೆರಳದಿರು! ಕರುಣಿಸು! ಶರಣು! ಶರಣು!!

9. ಬಲು ಪ್ರಕಾಶಮಾನವಾದ ವಸ್ತುಗಳನ್ನು ದೃಷ್ಟಿನೆಟ್ಟು ನೋಡಲು ಕಷ್ಟ. ಆದರೆ ಸಾಗರವನ್ನು ನೋಡಿದಾಗ ಕಣ್ಣುಗಳು ಕುಕ್ಕಲು ಕಾರಣ:

1) ಸಾಗರವು ಕೋಟಿ ಸೂರ್ಯನಂತೆ ಪ್ರಕಾಶಮಾನವಾಗಿರುವುದು

2) ಸಾಗರದ ನೀರಿನಲ್ಲಿ ಸೂರ್ಯನು ಪ್ರತಿಬಿಂಬಿತ ವಾಗುತ್ತಿರುಹುದು

3) ಹುಟ್ಟು ಕಡೆದು ಸಮುದ್ರದ ನೀರನನು ಅಟ್ಟಿಸುತ್ತಿರುವುದು

4) ಸಮುದ್ರದ ಮೇಲೆ ಬುರುಗು ತೇಲಾಡುತ್ತಿರುವುದು

10. ಆಕಾಶರಾಜನನ್ನು ಸರಿಗಟ್ಟಿದ ಸಮುದ್ರರಾಜನು ಹಿಡಿದಿರುವ ಬಿಲ್ಲು ಹೀಗಿದೆ:

1) ಸರ್ವವರ್ಣಗಳಿಂದ ಕೂಡಿದ ಇಂದ್ರಧನಸ್ಸಿನಂತೆ ಇದೆ

2) ಹಚ್ಚಹಸಿರು, ಕಪ್ಪುಬಣ್ಣಗಳಿಂದ ಕೂಡಿದೆ ಹಿಂದೂ ಮಹಾಸಾಗರದಂತಿದೆ

3) ಕರಿನೀಲಿ, ಕೆಂಪುಬಣ್ಣಗಳನ್ನು ಹೊಂದಿದೆ ಅರಬ್ಬೀ ಸಮುದ್ರದಂತಿದೆ

4) ಏಳು ಬಣ್ಣಗಳಿಂದ ಅಲಂಕೃತಗೊಂಡಿರುವ ಕಾಮನಬಿಲ್ಲಾಗಿದೆ

11. ಕವಿಯ ಕಲ್ಪನೆಯಲ್ಲಿ ಆಕಾಶವು ನಿಳಿಳಿಯಾಗಿರುವುದು ಈ ಕಾರಣದಿಂದ

1) ಸಾಗರದ ನೀಲಿಯು ಮುಗಿಲಿಗಿಂತ ಮಿಗಿಲಾಗಿ-ಇರುವುದು

2) ಸಾಗರದ ನೀರಿನಲ್ಲಿ ಪ್ರತಿಬಿಂಬಿತವಾಗಿ ನೀಲಿ-ಯಾಗಿರುವುದು

3) ಬಾಗಿದ ಆಕಾಶವು ಸಾಗರದ ಅಂಚನ್ನು ಸ್ಪರ್ಶಿಸಿ ಆಗಿರುವುದು

4) ಸಹಜವಾಗಿಯೇ ಆಕಾಶವು ನೀಲಿ ಬಣ್ಣವನ್ನು ಹೊಂದಿರುವುದು

12. ಸೊಕ್ಕಿನ ಆನೆಯಂತೇ ಚೆಲ್ಲಾಟವಾಡುತ್ತಿರುವ ಪಂಚಾನನ ಎಂದರೆ ಇದು:

1) ಮಹಾಭೂತಗಳನ್ನು ನುಂಗಿ ನೀರು ಕುಡಿದಿರುವ ಸಾಗರ

2) ಬೃಹದಾಕಾರವಾಗಿ ನರ್ತಿಸುತ್ತಿರುವ ಸಾಗರದ ಅಲೆಗಳು

3) ಅಲೆಗಳ ತಳ್ಳಾಟದಿಂದ ಉಂಟಾಗುವ ನೀರುಗುಳ್ಳೆಗಳು

4) ನೆಲ, ಗಾಳಿ, ಉರಿ, ಮುಗಿಲು, ಸಮುದ್ರ ಈ ಐದು ಭೂತಗಳು

13. ಮನಮೋಹಕ ಮತ್ತು ಆದ್ಭುತವಾದ ಸಾಗರದ ಅಲೆಗಳ ವೈಭವವು ಕವಿಯ ಕಲ್ಪನೆಗೆ ಕಾಣಿಸಿದ್ದು ಹೀಗೆ

1) ಸಮುದ್ರದ ತುಂಬ ತೇಲುತ್ತಿರುವ ಬೆಳ್ಳಿಯ ಬುರುಗಿನ ರಥಗಳಂತೆ

2) ಬಾಂದಳದಿ ಹಕ್ಕಿಗಳಂತೆ ಸಾಗುತ್ತಿರುವ ಬಿಳಿಯ ಮುಗಿಲುಗಳಂತೆ

3) ಮತ್ತೇರಿ ಸೊಕ್ಕಿ ಮನಬಂದಂತೆ ಚೆಲ್ಲಾಟವಾಡುತ್ತಿರುವ ಆನೆಗಳಂತೆ

4) ಹೆಡೆಯಲ್ಲಿ ಪುಷ್ಪರಾಗವನ್ನು ಹೊಂದಿರುವ ಕಾಳಸರ್ಪಗಳಮತೆ

14. 'ಕಿನ್ನರ ಕಿಂಪುರುಷರ ನೌಕೆಗಳಂತೆ ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ' ಎಂಬ ಹೊಲಿಕೆಯಲ್ಲಿ ಉಪಮೇಯ ಉಪಮಾನಗಳು ಅನುಕ್ರಮವಾಗಿ ಇಂತಿವೆ

1) ಕಿನ್ನರ ಕಿಂಪುರುಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ನೌಕೆ

2) ಶರಧಿಯ ಮೇಲೆ ತೇಲುತ್ತಿರುವ ನೌಕೆ, ಕಿನ್ನರ ಕಿಂಪುರುಷರ ರಥಗಳು,

3) ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ, ಕಿನ್ನರ ಕಿಂಪುರುಷರ ನೌಕೆಗಳು

4) ಕಿನ್ರ ಕಿಂಪುರುಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ

15. 'ಅರಬ್ಬಿಯ ಮುನ್ನಿಇಈರಿಗೆ ಕರಿನೀಲಿ ಬಣ್ಣವುಂಟು ಮುಂದೆ ಬಂದಿಹುದು ಕೆಂಪುಸಮುದ್ರವೊಂದು'. ಇಲ್ಲಿಯ ಪದ್ಯದ ಸಾಲಗಳಲ್ಲಿ ಅಡಿಗೆರೆ ಎಳೆದಿರುವ ಪದಗಳು ಅನುಕ್ರಮವಾಗಿ ಈ ಸಮಾಸಕ್ಕೆ ಸೇರಿವೆ.

1) ಕರ್ಮಧಾರಯ ಮತ್ತು ಕರ್ಮಧಾರಯ

2) ದ್ವಂದ್ವ ಮತ್ತು ತತ್ಪರುಷ

3) ತತ್ಪುರುಷ ಮತ್ತು ತತ್ಪುರುಷ

4) ಬಹುವ್ರೀಹಿ ಲಮತ್ತು ಕರ್ಮಧಾರಯ

16. ಭಾಷಾ ಕಲಿಕೆಯ ಅನುಕ್ರಮಣಿಕೆ ತತ್ವದನ್ವಯ ಸರಿಯಾದ ಕಲಿಕೆಯ ರೀತಿ ಹೀಗಿರುತ್ತದೆ

1) ಬಿಡಿ ಪದಗಳು ಮೊದಲು ನಂತರ ಪೂರ್ಣ ವಾಕ್ಯಗಳ ಕಲಿಕೆ

2) ಮಾತುಗಾರಿಕೆಯ ಕೌಶಲದ ನಂತರ ಓದುವ ಕೌಶಲದ ಕಲಿಕೆ

3) ಮೌನ ಓದಿನ ನಂತರ ಬಾಯ್ದೆರೆ ವಾಚನದ ಕಲಿಕೆ

4) ಸರಳದಿಂದ ಸಂಯುಕ್ತ. ಆಪರಿಚತದಿಂದ ಪರಿಚಿತ ಪದಗಳ ಕಲಿಕೆ

17. ಭಾಷಾ ಕಲಿಕೆಯ ಆರಂಭ ಮತ್ತು ಆಧು ಬಲ-ಗೊಳ್ಳುವುದು ಅನುಕ್ರಮವಾಗಿ ಭಾಷಾ ಬೋಧನೆಯ ಈ ತತ್ವಗಳಿಂದ

1) ಸಿದ್ಧತಾ ತತ್ವ ಅಭ್ಯಾಸ ತತ್ವ

2) ಅನುಕರಣ ತತ್ವ, ಅನುಕರಣ ತತ್ವ

3) ಸಿದ್ಧತಾ ತತ್ವ, ಅನುಕರಣ ತತ್ವ

4) ಅನುಕರಣ ತತ್ವ, ಅಭ್ಯಾಸ ತತ್ವ

18. ಒಬ್ಬ ಸಾಮಾನ್ಯ ವಿದ್ಯಾರ್ಥಿಯು ಪರಿಣಾಮಕಾರಿ ಕಲಿಕಾ ಪ್ರಕ್ರಿಯೆಯ ನಂತರ, ಆ ಪ್ರಕ್ರಿಯೆಗೆ ಸಂಬಂಧಿಸಿದ ಸಾಮಾನ್ಯ ಅಂಶಗಳಿಗೆ ಆತ ಸಮರ್ಪಕವಾಗಿ ಪ್ರತಿಕ್ರಿಯಿಸುತ್ತಿಲ್ಲ ಎಂದರೆ ಅದಕ್ಕೆ ಪ್ರಮುಖ ಕಾರಣ.

1) ಆತನು ಪ್ರಮುಖ ಅಂಶಗಳನ್ನು ಪಟ್ಟಿಮಾಡಿ-ಕೊಂಡಿಲ್ಲ